# ಡಿ.23, 24ಕ್ಕೆ ಎನ್‌ಐಟಿಕೆಯಲ್ಲಿ ಜಾಗತಿಕ ಸಮ್ಮೇಳನ

**ಮಂಗಳೂರು:** ಸುರತ್ಕಲ್ ಎನ್‌ಐಟಿಕೆ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ 14ನೆ ಜಾಗತಿಕ ಸಮ್ಮೇಳನ ಡಿ. 23 ಮತ್ತು 24ರಂದು ಸುರತ್ಕಲ್ ಎನ್‌ಐಟಿಕೆ ಬೆಳ್ಳಿಹಬ್ಬದ ಸಭಾಂಗಣದಲ್ಲಿ ನಡೆಯಲಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಸಮ್ಮೇಳನದ ಸಂಚಾಲಕ ವಿಠಲ್ ಬಿ. ಪರ್ವತಿಕರ್ ಮಾತನಾಡಿ, ಸಂಘದ ವಜ್ರ ಮಹೋತ್ಸವದ ಅಂಗವಾಗಿ ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಈ ಜಾಗತಿಕ ಸಮ್ಮೇಳನವನ್ನು ಆಯೋಜಿಸಲಾಗಿದ್ದು ಸುಮಾರು 600ರಷ್ಟು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಡಿ. 23ರಂದು ಬೆಳಗ್ಗೆ 10.15ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪ್ರೊ. ತ್ರಿಲೋಚನ್ ಶಾಸ್ತ್ರಿ ಮುಖ್ಯ ಅತಿಥಿಯಾಗಿರುವರು. ಸಂಘದ ಜಾಗತಿಕ ಅಧ್ಯಕ್ಷ ಕೀರ್ತಿರಾಜ್ ಸಾಲಿಯಾನ್ ದಿಕ್ಸೂಚಿ ಭಾಷಣ ನೀಡುವರು. ಕಾರ್ಯಕ್ರಮದಲ್ಲಿ 1965ನೆ ಪ್ರಥಮ ಬ್ಯಾಚ್‌ನ ಪದವೀಧರು ಸಹಿತ ಇತರರ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದರು. ಡಿ. 24ರಂದು ಸಂಜೆ 4ಕ್ಕೆ ಸಮಾರೋಪ ನಡೆಯಲಿದ್ದು ಈ ವೇಳೆ ವಿವಿಧ ಪ್ರದರ್ಶನ ಆಯೋಜಿಸಲಾಗಿದೆ ಎಂದರು. ಎನ್‌ಐಟಿಕೆ ಹಳೆ ವಿದ್ಯಾರ್ಥಿಗಳಾದ ಅಜಿತ್ ಕರ್ವಾಕರ್, ವಿಷ್ಣುದಾಸ್ ಪೈ, ಎನ್‌ಐಟಿಕೆಯ ಪ್ರೊ. ಅರುಣ್ ಎಂ. ಇಸ್ಲೂರ್, ಪಿಆರ್‌ಒ ವೈಷ್ಣವಿ ಉಪಸ್ಥಿತರಿದ್ದರು.

Hasa Diganta, Date: 21/12/22, p.no - 07